**OS-167/2015** **PW-1**

**ದಿಃ 05.04.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1, 4 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

**4** ಸರ್ವೆ ನಂಃ 55 ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಬಸಪ್ಪ, ಶಂಕ್ರಪ್ಪ ಮತ್ತು ಕಲ್ಲಪ್ಪ ರವರ ಹೆಸರಿನಲ್ಲಿರುತ್ತದೆ. ಈ ಆಸ್ತಿಯನ್ನು ಮೂರು ಜನರ ಹೆಸರಿನಲ್ಲಿ ಖರೀದಿ ಮಾಡಲಾಗಿದೆ. ಸಾವಿತ್ರವ್ವ ಹಿರೇಮಠ ಎಂಬುವವರಿಂದ ಆಸ್ತಿಯನ್ನು ಖರೀದಿ ಮಾಡಿದ್ದು ಯಾವ ಇಸ್ವಿಯಲ್ಲಿ ಖರೀದಿ ಮಾಡಲಾಗಿದೆ ಎಂಬುದು ನೆನಪಿಲ್ಲ. ಈ ಸರ್ವೆ ನಂಬರನ್ನು ಈ ದಾವೆಯಲ್ಲಿ ದಾವಾ ಆಸ್ತಿಯಾಗಿ ಮಾಡಿರುತ್ತೇನೆ. ಸರ್ವೆ ನಂಃ 144 ಮೂರು ಜನರ ಹೆಸರಿನಲ್ಲಿರುತ್ತದೆ. ಸರ್ವೆ ನಂಃ 49, 128 ಬಿ ಗಳು ಸಹ ಮೂರು ಜನರ ಹೆಸರಿನಲ್ಲಿರುತ್ತವೆ. ಪ್ಲಾಟ ನಂಬರ ಃ 21 ಸರ್ವೆ ನಂಃ 85 ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಮಲ್ಲಪ್ಪ ಕಟ್ಟಿ ರವರ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳೆಂದು ತೋರಿಸಲು ಯಾವದಾದರೂ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ವ್ಯವಹಾರವನ್ನು ಅವರೇ ಮಾಡಿದ್ದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಃ 144 , 49, 128 ಬಿ , ಪ್ಲಾಟ ನಂಃ 21 ಮತ್ತು ಸರ್ವೇ ನಂಃ 37 ಆಸ್ತಿಗಳನ್ನು ಎಷ್ಟು ಹಣ ಕೊಟ್ಟು ಖರೀದಿಸಿರುತ್ತಾರೆಂಬುದು ನೆನಪಿಲ್ಲ. ತಾವು ಎಷ್ಟು ಹಣಕ್ಕೆ ಖರೀದಿ ಮಾಡಲಾಗಿದೆ ಎಂಬುದನ್ನು ಅಸಲರ್ಜಿಯಲ್ಲಿ ತೋರಿಸಿರುತ್ತೀರಾ ಎಂದರೆ ಸಾಕ್ಷಿಯು ಕಾಗದ ಪತ್ರದಲ್ಲಿದ್ದು ಅಸಲರ್ಜಿಯಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಯಾವ ಕಾಗದ ಪತ್ರ ಎಂದರೆ ಸಾಕ್ಷಿಯು ಉತಾರ ಎಂದು ನುಡಿಯುತ್ತಾರೆ.

5. ಮಲ್ಲಪ್ಪನಿಗೆ ಕೆ ಐ ಡಿ ಬಿ ಯಿಂದ ಆಸ್ತಿ ಮಂಜೂರಾಗಿತ್ತು ಎಂದರೆ ಸಾಕ್ಷಿಯು ನಾನೇ ಮಾಡಿಸಿದ್ದು ಎಂದು ನುಡಿದು ನಂತರ ನನ್ನ ಮಾವ ಮಾಡಿಸಿರುತ್ತಾರೆಂದು ನುಡಿಯುತ್ತಾರೆ. ನಾನು ಸಂಬಂದಪಟ್ಟ ಪ್ರಾದಿಕಾರಕ್ಕೆ ಆಸ್ತಿಯನ್ನು ಮಲ್ಲಪ್ಪನಿಗೆ ಮಂಜೂರು ಮಾಡುವಂತೆ ಶಿಫಾರಸು ಪತ್ರ ನೀಡಿದ ಬಗ್ಗೆ ನೆನಪಿಲ್ಲ. ನನಗೆ ಬಸಪ್ಪ ಪತ್ರ ಕೊಟ್ಟಿರುತ್ತಾರೆಂಬುದು ಗೊತ್ತಿಲ್ಲ. ಮಲ್ಲಪ್ಪ ಮಂಜೂರಾದ ಆಸ್ತಿಯಲ್ಲಿ ಮನೆಯನ್ನು ಕಟ್ಟಿಸಿರುತ್ತಾರೆಂದರೆ ಸರಿ. ಮಲ್ಲಪ್ಪ ಸುಮಾರು ವರ್ಷಗಳಿಂದ ಸದರಿ ಆಸ್ತಿಯಲ್ಲಿ ಇರುತ್ತಾರೆಂದರೆ ಸಾಕ್ಷಿಯು ಕೂಡಿ ಇರುತ್ತೇವೆಂದು ನುಡಿಯುತ್ತಾರೆ. ತಾವು ಮತ್ತು ಮಲ್ಲಪ್ಪ ಜಂಟಿಯಾಗಿರುವ ಬಗ್ಗೆ ಪಡಿತರ ಚೀಟಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಬಸಪ್ಪನ ಬಳಿ ಇರುತ್ತದೆಂದು ನುಡಿಯುತ್ತಾರೆ. ನನ್ನ ಕುಟುಂಬಕ್ಕೆ ಪಡಿತರ ಚೀಟಿ ಇರುವದಿಲ್ಲ. ನಾನು 2ನೇ ಪ್ರತಿವಾದಿಗೆ ಪಡಿತರ ಚಿಳೀಟಿಯನ್ನು ನೀಡುವಂತೆ ಕೋರಿ ನನ್ನ ವಕೀಲರ ಮುಖಾಂತರ ಯಾವದೇ ನೋಟೀಸನ್ನು ಕೊಟ್ಟಿರುವದಿಲ್ಲ. ನಾನು ಪಡಿತರವನ್ನು ಪಡೆಯುವದಿಲ್ಲ. ಕಟ್ಟಿ ಕುಟುಂಬಕ್ಕೆ ಮೊದಲು ಪಡಿತರ ಚೀಟಿ ಇತ್ತು. ಈಗ ಇರುವದಿಲ್ಲ. ನಮ್ಮ ಪಡಿತರ ಚೀಟಿಯೂ ಸಹ ಇದ್ದು ಈಗ ಇರುವದಿಲ್ಲ ಇದ್ದರೂ ಬಸಪ್ಪನ ಬಳಿ ಇರುತ್ತದೆ. ನನ್ನ ವಕೀಲರು ಕೇಳದ ಕಾರಣ ಎಲ್ಲಾ ದಾಖಲೆಗಳು ಹಾಗೂ ನಾವು ಒಟ್ಟಾಗಿ ಇರುತ್ತೇವೆಂದು ಹೇಳುವ ದಾಖಲೆಗಳು ಬಸಪ್ಪನ ಬಳಿ ಇದೆ ಎಂದು ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವದಿಲ್ಲ.

6. 8ನೇ ಪ್ರತಿವಾದಿಯ ಹಸೆರಿನಲ್ಲಿ ಆಸ್ತಿ ಇರುವ ಬಗ್ಗೆ ದಾಖಲೆ ಹಾಜರುಪಡಿಸುತ್ತೇನೆಂದು ಕಳೆದ 4-5 ತಿಂಗಳಿಂದ ತಾವು ತಿಳಿಸುತ್ತಿದ್ದು ಇಲ್ಲಿಯವರೆಗೂ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆಂದು ನುಡಿಯುತ್ತಾರೆ. ಮುಂದಿನ ಮುದ್ದತ್ತಿಗೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಪ್ರತಿವಾದಿ ಪರ ವಕೀಲರು ಅದನ್ನು ಹಾಜರುಪಡಿಸಿದ ನಂತರ ಮುಂದುವರೆದ ಪಾಟೀ ಸವಾಲು ಮಾಡುವದಾಗಿ ತಿಳಿಸಿದ್ದು, ವಾದಿ ಪರ ವಕೀಲರು ಸಂಬಂದಪಟ್ಟ ದಾಖಲೆಗಳನ್ನು ಹಾಜರುಪಡಿಸಿರುವದಾಗಿ ತಿಳಿಸಿದ್ದು ಇವುಗಳನ್ನು ಸಾಕ್ಷಿಯು ಕೇಳಿ ನಾನು ದಾಖಲೆಗಳನ್ನು ಹಾಜರುಪಡಿಸುವದದಿಲ್ಲ ಎಂದು ನುಡಿಯುತ್ತಾರೆ. ನಾನು ವಕೀಲರಿಗೆ ಈ ದಾಖಲೆಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ನುಡಿಯುವ ಪೂರ್ವದಲ್ಲಿ ಆ ದಾಖಲೆಯನ್ನು ಹಾಜರುಪಡಿಸಲಾಗಿದೆಯೋ ಅಥವಾ ಪಡಿಸದಿದ್ದಲ್ಲಿ ಯಾವ

ಕಾರಣಕ್ಕಾಗಿ ಹಾಜರುಪಡಿಸಿಲ್ಲ ಎಂಬುದನ್ನು ವಕೀಲರ ಬಳಿ ಕೇಳಿರುವದಿಲ್ಲ, ಮುಂದೆ ಕೇಳುತ್ತೇನೆ. ನಾನು ಸದರಿ ವಿಚಾರವನ್ನು ಕೇಳಿಕೊಂಡು ಬಂದು ನಂತರ ಸಾಕ್ಷಿ ನುಡಿಯುವದಾಗಿ ಸಾಕ್ಷಿಯು ತಿಳಿಸಿದ ಕಾರಣ ಮುಂದುವರೆದ ಪಾಟೀ ಸವಾಲಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**